**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 239/2023**

| | | | |
|---|---|---|---|
| **ಹೆಸರು** | **:** | **ಶರಣಪ್ಪ** | **ಚಾ.ಸಾ. 3** |
| **ತಂದೆಯ ಹೆಸರು** | **:** | **ಗಾಳಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **48 ವರ್ಷ** | **ದಿನಾಂಕಃ 10-03-2025** |
| **ಉದ್ಯೋಗ** | **:** | **ಕೂಲಿಕೆಲಸ** | |
| **ವಾಸಸ್ಥಳ** | **:** | **ಚಿಮನಚೋಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 2, 4 ಮತ್ತು 5 ರವರು ನನಗೆ ಗೊತ್ತು. ಚಾಸಾ 1 ಮತ್ತು 6 ರವರು ನನಗೆ ಗೊತ್ತಿಲ್ಲ. ಈ ಮೊದಲು ಆರೋಪಿಗೆ ನಾನು ನೋಡಿಲ್ಲ.

ಈಗ ನೋಡುತ್ತಿರುವ ನಿಪಿ 1 ರ ದಾಖಲೆಯಲ್ಲಿ ನನ್ನ ಹೆಬ್ಬೆರಳಿನ ಗುರುತು ಇದೆ.

ಈಗ್ಗೆ 2 ವರ್ಷಗಳ ಹಿಂದೆ ನಾನು ಚಿಮ್ಮನಚೋಡ ಬಸ ನಿಲ್ದಾಣದಲ್ಲಿದಾಗ ಚಾಸಾ 4 ರವರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತು ಮಾಡಿಲ್ಲ ಮತ್ತು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕಃ 30-12-2022 ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ಪೋಲಿಸರು ನನಗೆ ಮತ್ತು ಚಾಸಾ-2 ರವರಿಗೆ ಠಾಣೆಗೆ ಕರೆದು ಭಾತ್ಮಿ ಬಗ್ಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-2 ರವರು ಪೋಲಿಸರ ಜೊತೆ ಮಧ್ಯಾಹ್ನ 2-45 ಗಂಟೆಗೆ ಭಾತ್ಮಿ ಸ್ಥಳಕ್ಕೆ ಹೊರಟು ಸೇರಿ ಕ್ರಾಸ ಬಸನಿಲ್ದಾಣ ಹಿಂದೆ ಮಧ್ಯಾಹ್ನ 3-15 ಗಂಟೆಗೆ ತಲುಪಿರುತ್ತೇವೆ ಎಂದರೆ ಸರಿಯಲ್ಲ. ಆಗ ಮರೆಯಲ್ಲಿ ನಿಂತು ನೋಡಿದಾಗ ಆರೋಪಿತನು ಅಕ್ರಮವಾಗಿ ಸೇಂದಿ ಮಾರಾಟ ಮಾಡುತಿದ್ದ ಎಂದರೆ ಸರಿಯಲ್ಲ. ಆಗ ಪೋಲಿಸರು ಅವನ ಮೇಲೆ ದಾಳಿ ಮಾಡಿ ಅವನ ಹತ್ತಿರ ಇದ್ದ 15 ಲೀಟರ ಪ್ಲಾಸ್ಟಿಕ ಕೊಡದಲ್ಲಿ 10 ಲೀಟರ ಸೇಂದಿ ಜಪ್ತಿ ಮಾಡಿ ಜಪ್ತಿ ಪಂಚನಾಮೆ

ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಸದರಿ ವಸ್ತುಗಳನ್ನು ಜಪ್ತಿ ಮಾಡಿ ಸೀಲ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ SPR ವಕೀಲರಿಂದಃ- ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**